ಕೊಟ್ಟಿದ್ದಾರೆ. ಅಲ್ಲದೆ ಡಾಕ್ಟರ್ ರಾಜಕುಮಾರ್ ಸಂಘದವರು ಪುಕ್ಕಟೆಯಾಗಿ ಡಿಸ್ಟ್ರಿಬ್ಯೂಟ್ ಮಾಡುತ್ತೇವೆ ಎಂದು ಬರೆದಿದ್ದಾರೆ. ಕೆಲವರು ಹೈಸ್ಕೂಲುಗಳಂ, ಕಾಲೇಜುಗಳು ಈ ಜವಾಬ್ದಾರಿಯನ್ನು ವಹಿಸಿಕೊಂಡಿವೆ. ಬೆಂಗಳೂರು ನಗರದಲ್ಲಿ ಕೊಆಪರೇಟಿವ್ ಸೊಸೈಟೀಸ್, ಟಿ.ಎ.ಪಿ.ಎಂ.ಎಸ್. ಮುಖಾಂತರ ಸರ್ಕಾರದ ೧೬ ಸೆಂಟರ್‌ಗಳಲ್ಲಿ ಶಾಲೆಗಳಲ್ಲಿ ಕೂಡ ಪಠ್ಯಪುಸ್ತಕಗಳ ಮಾರಾಟದ ವ್ಯವಸ್ಥೆಯನ್ನು ಮಾಡಿದ್ದೇವೆ. ಹೊಸದಾಗಿ ಮಾಡತಕ್ಕಂಥ ಕಾಲದಲ್ಲಿ ಸ್ವಲ್ಪ ತೊಂದರೆಯಾಗುತ್ತದೆ. ಈ ಸಂದರ್ಭದಲ್ಲಿ ತಂದೆತಾಯಿಗಳನ್ನು, ವಿದ್ಯಾರ್ಥಿಗಳನ್ನು ಕೇಳಿಕೊಳ್ಳುತ್ತೇನೆ; ದಯಮಾಡಿ ಇನ್ನೊಂದು ವಾರ ಸಹಕರಿಸಿ ನಂತರ ಪುಸ್ತಕಗಳ ಅಭಾವ ಇರುವುದಿಲ್ಲ, ಆ ರೀತಿ ಮಾಡುತ್ತೇವೆ. ಯಾರು ೧೨ ಪರ್ಸೆಂಟಿನಂತೆ ಮಾರಾಟಮಾಡುತ್ತೇವೆ ಎಂದು ಮುಂದೆ ಬಂದಿದ್ದಾರೆ, ಅವರಿಗೆಲ್ಲಾ ಕೊಡಿ ಎಂದಂ ಮೂರು ದಿವಸಗಳ ಹಿಂದೆ ಹೇಳಿದ್ದೇನೆ. ಮೈಸೂರು ಜಿಲ್ಲೆಯಲ್ಲಿ ಹೇಗೆ ವ್ಯಾಪಾರ ನಡೆಯುತ್ತಿದೆ ಎಂದು ಮಾನ್ಯ ಗಂಗಾಧರನ್‌ರವರನ್ನು ಕೇಳಿ. ಬೆಂಗಳೂರಿನಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಯಾರು ವ್ಯಾಪಾರ ಮಾಡುತ್ತಾರೆ ಆ ಜನಗಳ ಪರವಾಗಿ ಇವರು ಮಾತನಾಡುತ್ತಾ ಇದ್ದಾರೆ. ನಾವು ಜನತೆಯ ಹಿತದೃಷ್ಟಿಯಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ತಂದೆತಾಯಿಗಳ ಹಿತದೃಷ್ಟಿಯಿಂದ ಮಾಡುತ್ತಿದ್ದೇವೆಯೇ ಇಲ್ಲವೇ ಎನ್ನುವುದನ್ನು ತಾವೇ ಯೋಚನೆಮಾಡಬೇಕಂ. ಆ ದೃಷ್ಟಿಯಿಂದ ಪಠ್ಯಪುಸ್ತಕಗಳ ವ್ಯಾಪಾರ ಇನ್ನೊಂದುವಾರದಲ್ಲಿ ಸರಿಹೋಗುತ್ತದೆ. ತಂದೆತಾಯಿಂಗಳಿಗೆ, ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಅನಿವಾರ್ಯ. ಅವರಲ್ಲಿ ಒಂದು ಶಂಕೆ ಇದೆ, ಪುಸ್ತಕಗಳು ತೀರಿಹೋದರೆ ನಮ್ಮ ಗತಿ ಏನು ಎಂಬ ಶಂಕೆ ಇದೆ.ಅದಕ್ಕೆ ಅವಕಾಶವಿಲ್ಲ. ನಾವು ಸಾಕಷ್ಟು ಪ್ರಮಾಣದಲ್ಲಿ ಪುಸ್ತಕಗಳನ್ನು ಮುದ್ರಣಮಾಡಿಸಿದ್ದೇವೆ. ಬೇರೆ ಭಾಷೆಗಳ ೯ ಟೈಟಲ್ಸ್ ಇನ್ನೂ ಬಂದಿಲ್ಲ. ಆಂಧ್ರ ತಮಿಳುನಾಡಿಗೆ ಕೆಲವು ಪುಸ್ತಕಗಳನ್ನು ಮುದ್ರಣಮಾಡಿಕೊಡಲು ಕೊಟ್ಟಿದ್ದೇವೆ. ಕನ್ನಡ ಪುಸ್ತಕಗಳನ್ನು ಅವರಿಗೆ ನಾವು ಮುದ್ರಣಮಾಡಿಕೊಡುತ್ತಾ ಇದ್ದೇವೆ. ಮಿಕ್ಕೆ ಎಲ್ಲಾ ಪುಸ್ತಕಗಳು ಬಂದಿವೆ. ಪುಸ್ತಕಗಳನ್ನು ಸಾಕಷ್ಟು ಪ್ರಮಾಣದಲ್ಲಿ ಮುದ್ರಿಸಿದ್ದೇವೆ. ಪುಸ್ತಕಗಳನ್ನು ದುಡ್ಡು ತೆಗೆದುಕೊಂಡು ಕೊಡಬೇಕು. ಎರಡನೆಯಂ ಕಂತನ್ನು ಕೊಡಬೇಕಾದರೆ ಸ್ವಲ್ಪ ತಡ ಆಗಿರಬಹುದು. ಈ ವ್ಯವಸ್ಥೆ ಸರಿಯಾಗಿಲ್ಲ ಎಂದಂ ಹೇಳುವುದು ಬೇಡ. ಇದಂ ಹಿಂದಿನಿಂದ ನಡೆದು ಕೊಂಡು ಬಂದಿರುವುದಂ.

ಶ್ರೀ ಎಂ. ಮಹದೇವ್.—ಅಡ್ಮಿಷನ್ ಫಾರಂ ಸಿಕ್ಕುತ್ತಾ ಇಲ್ಲ; ಡಿ. ಸಿ. ಫಾರಂ ಸಿಕ್ಕುತ್ತಾ ಇಲ್ಲ, ರಸೀದಿ ಪುಸ್ತಕ ಸಿಕ್ಕುತ್ತಾ ಇಲ್ಲ. ಇದು ಯಾವ ಆಡಳಿತ ?

ಶ್ರೀ ಬಿ. ರಾಚಯ್ಯ.—ಇದು ಮಹದೇವ್ ಆಡಳಿತ.

ಶ್ರೀ ಪಂಪಾವತಿ.—ಮಾನ್ಯ ಮಹದೇವ್ ಅವರಂ ಮೂತಂ ಬದಲಾಯಿಸುತ್ತಾ ಇದ್ದಾರೆ. ಅವರಂ ಪುಸ್ತಕಗಳ ಮಾರಾಟದ ಬಗ್ಗೆ ಹೇಳುತ್ತಿದ್ದಾರೆ, ಇವರು ಫಾರಂಗಳ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಮೈಸೂರಿನಿಂದ ಮಾನ್ಯ ಗಂಗಾಧರನವರು ಬಂದಿದ್ದಾರೆ, ಅಲ್ಲಿ ಹೇಗೆ ವ್ಯವಸ್ಥೆ ಇದೆ ಎಂದು ಕೇಳಿ. ಆದ್ದರಿಂದ ಇವರು ಹೇಳಿದ್ದರಲ್ಲಿ ಹುರಂಳಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಹದೇವ್.—ಆಲ್ಲಿ ಯಾವ ಹಣದ ರಸೀದಿ ಪುಸ್ತಕವೂ ಇಲ್ಲ.

ಶ್ರೀ ಜೆ. ಡಿ. ಸೋಮಪ್ಪ.—ಅವರು ಎರಡು, ಮೂರು ಕಂಡೀಷನ್‌ಗಳನ್ನು ಹಾಕಿದ್ದಾರೆ. ಒಂದಂ ತಿಂಗಳೊಳಗೆ ರೀಇಂಬರ್ಸ್ ಮಾಡಿಲ್ಲ.

ವಿಷಯ.—ಕಬಿನಿ ನದಿಗೆ ಕೇರಳದವರು ಅಣೆಕಟ್ಟು ಕಟ್ಟುವ ಬಗ್ಗೆ

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ಕಬಿನಿ ನದಿಗೆ ಅಡ್ಡವಾಗಿ ಕೇರಳಸರ್ಕಾರದವರು ಒಂದಂ ದೊಡ್ಡ ಆಣೆಕಟ್ಟೆಯನ್ನು ಕಟ್ಟುತ್ತಾರೆ ಎನ್ನುವ ವದಂತಿ ಬಂದಿದೆ. ಅದನ್ನು ಪುಷ್ಟೀಕರಿಸಿ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಾದ ನಜೀರ್ ಸಾಹೇಬರು ಅದು ನಿಜ, ಅದನ್ನು ಕಟ್ಟುತ್ತಾ ಇದ್ದಾರೆ ಎಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಕಬಿನಿ ನದಿಗೆ ಕೇರಳ ಸರ್ಕಾರದವರು ಏನಾದರೂ ಅಡ್ಡಗಟ್ಟೆ ಕಟ್ಟಿದ್ದರೆ ನಮ್ಮ ಕಬಿನಿ ಪ್ರದೇಶದ ಆಯುಕಟ್ಟಿನ ಜನರಿಗೆ ತೊಂದರೆಯಾಗುತ್ತದೆ. ಈ ಬಗ್ಗೆ ಸರ್ಕಾರದ ನಿಲುವು ಏನು? ಕರ್ನಾಟಕ ಸರ್ಕಾರದವರು ಕೇರಳ ಸರ್ಕಾರದವರಿಗೆ ಕಬಿನಿ ನದಿಗೆ ಅಡ್ಡಗಟ್ಟೆ ಕಟ್ಟುವುದಕ್ಕೆ ಅವಕಾಶ ಕೊಟ್ಟಿದ್ದಾರೆಯೇ ಅಥವಾ ಇವರನ್ನು ಕೇಳಿದ್ದಾರೆಯೇ, ಅಥವಾ ಕೇಂದ್ರ

ಸರ್ಕಾರದೊಡನೆ ಪ್ರಸ್ತಾಪ ಮಾಡಿದ್ದಾರೆಯೇ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಅಭಿಪ್ರಾಯವನ್ನು ಸದನಕ್ಕೆ ಕೊಡಬೇಕು ಎಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಶ್ರೀ. ಹೆಚ್. ಡಿ. ದೇವೇಗೌಡ—ಆರೀತಿ ಯಾವುದೇ ಪ್ರಪೊಸಲ್ ನಮ್ಮ ಮುಂದೆ ಬಂದಿಲ್ಲ. ನಮಗೆ ಅದರ ವಿಷಯ ಗೊತ್ತಿಲ್ಲ. ಒಂದುವೇಳೆ ಅಂಥಾದ್ದು ಇದ್ದರೆ ಸರ್ಕಾರದ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ.

ವಿಷಯ.—ನಂಜನಗೂಡು ಕ್ಷೇತ್ರದಲ್ಲಿ ಕಾಡಾನೆಗಳ ಹಾವಳಿ

ಶ್ರೀ ಎಂ. ಮಹದೇವ್.—ನನ್ನ ಕ್ಷೇತ್ರದಲ್ಲಿ ಆನೆಗಳ ಕಾಟ ಜಾಸ್ತಿಯಾಗಿದೆ. ದಿನಾಂಕ ೨೯-೧೧-೧೯೮೩ರಲ್ಲಿ ಒಬ್ಬ ಸತ್ತಿದ್ದಾನೆ. ಸರ್ಕಾರ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ವಿಷಯವನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ ಮತ್ತು ಪತ್ರಿಕಾ ಹೇಳಿಕೆಯನ್ನೂ ಕೊಟ್ಟಿದ್ದೇನೆ. ಮಾನ್ಯ ಅರಣ್ಯ ಸಚಿವರು, ಅರಣ್ಯ ಇಲಾಖೆಯವರು ಇದರ ಬಗ್ಗೆ ಏನೂ ಕ್ರಮ ತೆಗೆದು ಕೊಂಡಿಲ್ಲ.

ಅಧ್ಯಕ್ಷರು.—ಸದನದಲ್ಲಿ ನೀವು ಏನಾದರೂ ಹೇಳಬೇಕಾದರೆ, ಅವಕಾಶ ಬೇಕಾದರೆ ಅದಕ್ಕೆ ಕೆಲವು ನಿಯಮಗಳಿವೆ. I cannot allow this to go on.

ಶ್ರೀ ಎಂ. ಮಹದೇವ್.—ಅವಕಾಶಕೊಡಿ.

ಅಧ್ಯಕ್ಷರು.—ಎಲ್ಲಾ ಅವಕಾಶ ನಿಮ್ಮೊಬ್ಬರಿಗೇ ಕೊಡಬೇಕು ಅಂದರೆ ಮುಂದಿನಸಾರಿ ಮಾಡೋಣ.

ಶ್ರೀ ಎಂ. ಮಹದೇವ್—ನಾವು ಕ್ಷೇತ್ರಕ್ಕೆ ಹೋಗುವುದಕ್ಕೆ ಆಗಂತ್ತಾ ಇಲ್ಲ. ಮತ್ತೆ ಅವಕಾಶ ಕೊಡಿ, ನಾನು ಕಾಳಿತುಕೊಳ್ಳುತ್ತೇನೆ, ದಯವಿಟ್ಟು ಇನ್ನೊಂದು ಅವಕಾಶಕೊಡಿ.

Mr. Speaker.—There cannot be two matters under Rule 334 at the same time. I cannot tolerate this kind of indiscipline.

ಶ್ರೀ ಎಂ. ಮಹದೇವ್.—ಸರ್ಕಾರ ಅದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿಲ್ಲ. ಏನು ಮಾಡಬೇಕು ಅಧ್ಯಕ್ಷರೆ, ತಾವೇ ಹೇಳಿ. ಇದು ಮಂಡಿಸ್ಪವಾದ ವಿಚಾರವಲ್ಲವೇ? ಆನೆಗಳು ಒಬ್ಬೊಬ್ಬರ ಪ್ರಾಣವನ್ನು ತೆಗೆಯುತ್ತಾ ಇವೆ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲದೇ ಹೋದರೆ ಹೇಗೆ? ದಯವಿಟ್ಟು ತಾವು ನಮಗೆ ಅವಕಾಶಕೊಡಿ ಇಲ್ಲವೇ ಅವರಿಂದ ಉತ್ತರ ಹೇಳಿಸಿ.

Mr. Speaker —You cannot defy the Chair like this.

Sri. M. Mahadev.—Please allow me to.

Mr. Speaker.—This will not go the records.

ಶ್ರೀ ಎಂ. ಮಹದೇವ್.—ಅಧ್ಯಕ್ಷರೇ, ದಯವಿಟ್ಟು ನಮ್ಮ ಕಷ್ಟವೇನಿದೇ ಎಂಬುದನ್ನು ದಯವಿಟ್ಟು ಕೇಳಿ.

ಅಧ್ಯಕ್ಷರು.—೩ಷಿಳರ ಕೆಳಗೆ ನೋಟೀಸ್ ಏನು ಬಂದಿವೆ ಅವುಗಳನ್ನು ಆರ್ಡರ್ ಪ್ರಕಾರವಾಗಿ ಕರೆಯುತ್ತೇನೆ, ಆದರೆ ಸದಸ್ಯರು ನನಗೆ ಅಡ್ಡಿ ಬಂದು ಹೀಗೆ ಮಾತನಾಡುವುದಾದರೆ ಈ ಸದನದಲ್ಲಿ ಆ ರೀತಿಯಾಗಿ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಎಂ. ಮಹದೇವ್.—ನಾನು ಕೊಟ್ಟರತಕ್ಕ ನೋಟೀಸ್‌ನಲ್ಲಿ ಎ ಆಂಡ್ ಬಿ ಎಂದು ಕೊಟ್ಟಿದ್ದೇನೆ.

ಅಧ್ಯಕ್ಷರು.—ಹಾಗೆ ಕೊಟ್ಟರೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.